**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**Crl.Misc No.**309/2024
**PW** : 1

**ದಿನಾಂಕಃ** 30-06-2025 **ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಸ್ವಾತಿ ಕೆ** |
| **ಗಂಡನ ಹೆಸರುಃ** | **ನಾಗರಾಜ** |
| **ವಯಸ್ಸುಃ** | **25 ವರ್ಷ** |
| **ಉದ್ಯೋಗಃ** | **ಗೃಹಿಣಿ** |
| **ವಾಸ ಸ್ಥಳಃ** | **ಗಾಯನಹಳ್ಳಿ, ಸಾಲಿಗ್ರಾಮ** |

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ ಎಮ್.ಸಿ.ಎಸ್ ವಕೀಲರಿಂದಃ**

1. ದಿ. 14.11.2021 ರಂದು ಅರಕಲಗೂಡು ತಾಲ್ಲೂಕಿನ, ಕೇರಳಾಪುರದಲ್ಲಿರುವ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ನನ್ನ ಮತ್ತು ಎದುರುದಾರನ ಮದುವೆ ಎರಡು ಕುಟುಂಬಗಳ ಉಪಸ್ಥಿತಿಯಲ್ಲಿ ಹಿಂದು ಸಂಪ್ರದಾಯದಂತೆ ಆಗಿರುತ್ತದೆ. ಮದುವೆ ಸಮಯದಲ್ಲಿ ನನ್ನ ಹೆತ್ತವರು ಎದುರುದಾರನಿಗೆ 100 ಗ್ರಾಂ ಚಿನ್ನದ ಒಡವೆ ಮತ್ತು 2,00,000/- ರೂ. ಹಣವನ್ನು ವರದಕ್ಷಿಣೆಯ ರೂಪದಲ್ಲಿ ನೀಡಿರುತ್ತಾರೆ. ಅಷ್ಟೇ ಅಲ್ಲದೇ ನನ್ನ ತವರು ಮನೆಯವರು ಸುಮಾರು 10 ಲಕ್ಷ ರೂಪಾಯಿ ಖರ್ಚು ಮಾಡಿ ನನ್ನ ಮತ್ತು ಎದುರುದಾರನ ವಿವಾಹವನ್ನು ಮಾಡಿಸಿರುತ್ತಾರೆ.

2. ಮದುವೆಯಾದ ನಂತರ ನಾನು ಮಲುಗಳನಹಳ್ಳಿಯಲ್ಲಿರುವ ಎದುರುದಾರನ ಮನೆಯಲ್ಲಿ ಸುಮಾರು 6 ತಿಂಗಳುಗಳ ಕಾಲ ವಾಸವಿದ್ದೆ. ಎದುರುದಾರನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ನಾನು, ನನ್ನ ಅತ್ತೆ, ಮಾವ ಮತ್ತು ಮೈದುನನ ಜೊತೆ ಊರಿನಲ್ಲಿ ವಾಸವಿದ್ದೆ. ನನ್ನ

ಅತ್ತೆ, ಮಾವ ಮತ್ತು ಮೈದುನ ನನಗೆ ಯಾವಾಗಲು ಕೀಳಾಗಿ ಮಾತನಾಡಿ ಮಾನಸಿಕ ಹಿಂಸೆಯನ್ನು ನೀಡುತ್ತಿದ್ದರು. ನೀನು ಕಡಿಮೆ ವರದಕ್ಷಿಣೆಯನ್ನು ತಂದಿದ್ದೀಯಾ, ನನ್ನ ಮಗನ್ನು ಬೇರೆ ಕಡೆ ಮದುವೆ ಮಾಡಿಸಿದ್ದರೇ ನನ್ನ ಮಗನಿಗೆ ಒಳ್ಳೆಯ ವರದಕ್ಷಿಣೆ ಸಿಗುತ್ತಿತ್ತು ಎಂದು ಹೆಚ್ಚಿನ ವರದಕ್ಷಿಣೆ ತರುವಂತೆ ನನಗೆ ವರದಕ್ಷಿಣೆ ಕಿರುಕುಳವನ್ನು ಸಹ ನೀಡುತ್ತಿದ್ದರು. ನನ್ನ ತಾಯಿ ನನ್ನನ್ನು ನೋಡಲು ಬಂದರೆ ನನ್ನ ತಾಯಿಗೂ ಸಹ ನನ್ನ ಅತ್ತೆ, ಮಾವ ಮತ್ತು ಮೈದುನ ಅವಾಚ್ಯ ಶಬ್ಧಗಳಿಂದ ಬೈಯುತ್ತಿದ್ದರು. ಎದುರುದಾರನು ಸಹ ಅವರ ತಂದೆ ತಾಯಿ ಮತ್ತು ಸಹೋದರನೊಂದಿಗೆ ಸೇರಿ ನನಗೆ ಮಾನಸಿಕ ಕಿರುಕುಳ ನೀಡುತ್ತಿದ್ದು, ನಾನು ಬೇರಯವರನ್ನು ಮದುವೆ ಆಗಿದ್ದರೆ ನನಗೆ ಹೆಚ್ಚಿನ ವರದಕ್ಷಿಣೆ ಮತ್ತು ಜಮೀನು ಸಿಗುತ್ತಿತ್ತು ಎಂದು ಎದುರುದಾರನು ಸಹ ನನಗೆ  ವರದಕ್ಷಿಣೆ ಕಿರುಕುಳವನ್ನು ನೀಡುತ್ತಿದ್ದರು.

3. ಮದುವೆ ಆದ 6 ತಿಂಗಳುಗಳ ಕಾಲವು ಸಹ ನನಗೆ ಎದುರುದಾರ ಮತ್ತು ಅವರ ಮನೆಯವರು ನೀಡುತ್ತಿದ್ದ ಮಾನಸಿಕ ಮತ್ತು ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಸದರಿ ವಿಷಯವನ್ನು ನನ್ನ ತವರು ಮನೆಯಲ್ಲಿ ಹೇಳಿದಾಗ, ಎದುರುದಾರನ ಮನೆಯಲ್ಲಿ ನ್ಯಾಯ ಪಂಚಾಯಿತಿಗೆ ಮಾಡಿರುತ್ತಾರೆ. ನ್ಯಾಯ ಪಂಚಾಯಿತಿಕೆ ಮಾಡಲು ಬಂದಿದ್ದ ಹಿರಿಯರನ್ನು ಸಹ ಎದುರುದಾರ ಮತ್ತು ಅವರ ಮನೆಯವರು ಬೈದು ಕಳುಹಿಸುತ್ತಾರೆ. ನಂತರ ನಾನು ತುಂಬಾ ಬೇಡಿಕೊಂಡು ನನ್ನನ್ನು ತಮ್ಮ ಜೊತೆ ಬೆಂಗಳೂರಿಗೆ ಕರೆದುಕೊಂಡು ಹೋಗುವಂತೆ ಎದುರುದಾರನಿಗೆ ಕೇಳಿದ್ದು, ನಂತರದಲ್ಲಿ ಎದುರುದಾರನು ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು. ಆದರೆ ಬೆಂಗಳೂರಿನ ಮನೆಯಲ್ಲಿ ಯಾವುದೇ ಗೃಹಪಯೋಗಿ ಸಾಮಾನುಗಳು ಇಲ್ಲದಿದ್ದು, ನನ್ನ ತವರು ಮನೆಯವರೇ ಮನೆಗೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳನ್ನು ತಂದು ಕೊಟ್ಟಿರುತ್ತಾರೆ. ಅದಾಗ್ಯೂ ಸಹ ಎದುರುದಾರನು ನನಗೆ ವಿನಾಕಾರಣ ಮಾನಸಿಕ ಹಿಂಸೆಯನ್ನು ನೀಡುತ್ತಿದ್ದರು. ತಾವು ಆಸ್ಪತ್ರೆಗೆ ಕೆಲಸಕ್ಕೆ ಹೋದವರು ಸತತವಾಗಿ ಒಂದು ವಾರವಾದರು ಸಹ ಮನೆಗೆ ಬರುತ್ತಿರಲಿಲ್ಲ ಮತ್ತು ನನಗೆ ಬೇಕಾದ ಅಗತ್ಯದ ಯಾವುದೇ ವಸ್ತುಗಳನ್ನು ಸಹ ತಂದು ಕೊಡುತ್ತಿರಲಿಲ್ಲ. ಅಷ್ಟೇ ಅಲ್ಲದೇ ಎದುರುದಾರನು ಸಾರಾಯಿ ಕುಡಿದು ಬಂದು ನನಗೆ ಹೊಡೆದು ನನ್ನೊಂದಿಗೆ ಜಗಳ ಮಾಡುತ್ತಿದ್ದರು. ಎದುರುದಾರನು ನನಗೆ ಹೇಳದೇ ಕೇಳದೇ, ನನ್ನನ್ನು ಒಬ್ಬಳನ್ನೇ ಬೆಂಗಳೂರಿನಲ್ಲಿ ಬಿಟ್ಟು ತಾವು ಒಬ್ಬರೆ ಊರಿಗೆ ಹೋಗುತ್ತಿದ್ದರು.

4. ಹಬ್ಬಕ್ಕೆ ನನ್ನ ತವರು ಮನೆಯವರು ನನ್ನನ್ನು ಕರೆಯಲು ಬಂದರೆ ಎದುರುದಾರನು ನನ್ನನ್ನು ತವರು ಮನೆಗೆ ಕಳುಹಿಸಿರುತ್ತಿರಲಿಲ್ಲ. ಯಾವಾಗಾದರೂ ನನ್ನನ್ನು ತವರು ಮನೆಗೆ ಕಳುಹಿಸಲು ಎದುರುದಾರನು ಬಸ್ ಹತ್ತಿಸಿ, ಯಾವುದಾದರೂ ಪುರುಷ ಸಹ ಪ್ರಯಾಣಿಕರು ನನ್ನ ಪಕ್ಕದ ಸೀಟಿನಲ್ಲಿ ಕುಳಿತರೇ ಅವನಿಗೂ ಮತ್ತು ನಿನಗೂ ಏನೂ ಸಂಬಂಧ ಎಂದು ಎದುರುದಾರ ನನ್ನೊಂದಿಗೆ ಜಗಳ ಮಾಡುತ್ತಿದ್ದರು. ಕೆಲವೊಮ್ಮೆ ಊರಿಗೆ ನನ್ನನ್ನು ಒಬ್ಬಳನ್ನೆ ಹೋಗು ಎಂದು ಎದುರುದಾರ ಹೇಳಿ ನಾನು ಬಸ್ ಹತ್ತಲು ಮನೆಯಿಂದ ನಡೆದುಕೊಂಡು ಬರುವಾಗ ಎದುರುದಾರ ನನ್ನನ್ನು ಹಿಂಬಾಲಿಸಿಕೊಂಡು ಬರುತ್ತಿದ್ದರು. ಯಾಕೆ ನೀವು ನನ್ನನ್ನು ಹಿಂಬಾಲಿಸಿರುತ್ತೀರಿ ಅದರ ಬದಲು ನನ್ನ ಜೊತೆ ಯಾಕೆ ನೀವು ಬರುವುದಿಲ್ಲ ಎಂದು ನಾನು ಎದುರುದಾರನಲ್ಲಿ ಕೇಳಿದಾಗ ನೀನು ಬೇರೆ ಯಾರ ಜೊತೆ ಓಡಿ ಹೋಗುತ್ತೀಯಾ ಎಂದು ನೋಡಲು ನಾನು ನಿನ್ನನ್ನು ಹಿಂಬಾಲಿಸುತ್ತಿದ್ದೆ ಎಂದು ಎದುರುದಾರ ಹೇಳಿರುತ್ತಾನೆ.

5. ಯಾಕೆ ನನಗೆ ಈ ರೀತಿ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದೀರಾ ಎಂದು ಕೇಳಿದರೆ ನನಗೆ ನೀನು ಇಷ್ಟ ಇಲ್ಲ ನೀನು ನನಗೆ ವಿವಾಹ ವಿಚ್ಚೇದನವನ್ನು ಕೊಟ್ಟು ನಿನ್ನ ತವರು ಮನೆಗೆ ವಾಪಸ್ಸು ಹೋಗು ಎಂದು ಎದುರುದಾರ ಹೇಳಿರುತ್ತಾನೆ. ಮದುವೆ ಆದ ಒಂದು ವರ್ಷಗಳ ಕಾಲ ನಾನು ಎದುರುದಾರನ ಜೊತೆ ಇದ್ದು, ಸತತವಾಗಿ ಎದುರುದಾರ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ.

6. ಎದುರುದಾರನಿಗೆ  ಎಕರೆ ಜಮೀನು ಇದ್ದು, ಎದುರುದಾರನಿಗೆ ಜಮೀನಿಂದ ವಾರ್ಷಿಕ 10 ಲಕ್ಷ ಆದಾಯ ಇದೆ. ಅದಲ್ಲದೇ ಎದುರುದಾರನು ಬೆಂಗಳೂರಿನ ಲೈಪ್ ಲೈನ್ ಆಸ್ಪತ್ರೆಯಲ್ಲಿ ಮ್ಯಾನೇಜರಾಗಿ ಕೆಲಸ ಮಾಡುತ್ತಿದ್ದಾರೆ. ಸದರಿ ಉದ್ಯೋಗದಿಂದ ಎದುರುದಾರನಿಗೆ ತಿಂಗಳಿಗೆ 30,000/- ಸಂಬಳವಿದೆ. ಎದುರುದಾರನಿಗೆ ಊರಿನಲ್ಲಿ ಆರ್.ಸಿ.ಸಿ ಮನೆಯು ಸಹ ಇದೆ. ನನ್ನ ತಾಯಿ ಹೃದ್ರೋಗಿಯಾಗಿದ್ದು ಅವರಿಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಿರುತ್ತದೆ. ನನ್ನ ತಂದೆ ಮರಣ ಹೊಂದಿರುತ್ತಾರೆ. ನಾನು ಇಲ್ಲಿಯವರೆಗೆ ನನ್ನ ತವರು ಮನೆಯಲ್ಲಿ ಇರುತ್ತೇನೆ. ಇಂದಿನವರೆಗೂ ನನ್ನ ಜೀವನಾಂಶಕ್ಕಾಗಿ ಎದುರುದಾರ ಯಾವುದೇ ಖರ್ಚನ್ನು ನೀಡಿರುವುದಿಲ್ಲ. ಎದುರುದಾರನಿಗೆ ನನ್ನನ್ನು  ಸಾಕುವಷ್ಟು  ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ನೀಡಲು ಪ್ರಾರ್ಥನೆ.

ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ 1 ಮತ್ತು 1(ಎ)ಎಂದು, ಫೊಟೋವನ್ನು ನಿಪಿ.2 ಎಂದು, ಗುರುತಿಸಲಾಯಿತು.

**ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**